ಸೋಮವಾರ 06.10.2025
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 67
Digital Varthe Kannada Daily
Volume 01 - Issue 67
Monday
06.10.2025
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

## ವಕೀಲ, ಹಿಂದೂ ಕಾರ್ಯಕರ್ತನ ಮೇಲೆ ಭೀಕರ ಹಲ್ಲೆ

### ಮನೀಶ್ ಗುರುಜಿ, ತಮ್ಮ ಹಾಗೂ ಪಟಾಲಂ ವಿರುದ್ಧ ಗಂಭೀರ ಆರೋಪ

ನೆಲಮಂಗಲ: ನವರಾತ್ರಿ ಉತ್ಸವದ ಹೆಸರಿನಲ್ಲಿ ರಸ್ತೆ ತಡೆ ನಡೆಸುತ್ತಿದ್ದವರನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತ ಹಾಗೂ ವಕೀಲ ಗಿರೀಶ್ ಮತ್ತು ಅವರ ಕುಟುಂಬದ ಮೇಲೆ ಮನೀಶ್ ಗುರುಜಿ, ಅವರ ತಮ್ಮ ಹಾಗೂ ಪಟಾಲಂ ಭೀಕರ ಹಲ್ಲೆ ನಡೆಸಿದ ಆರೋಪ ಕೇಳಿಬಂದಿದೆ. ಈ ಘಟನೆ ಕಳೆದ ಭಾನುವಾರ ರಾತ್ರಿ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯ ಗೋರೂರು ಗ್ರಾಮದ ಬಳಿ, ಗುಡೇಮಾರನಹಳ್ಳಿ-ದಾಬಸ್ಪೇಟೆ ರಸ್ತೆಯಲ್ಲಿ ನಡೆದಿದೆ.

ಈ ಕುರಿತು ಪತ್ರಿಕಾ ಗೋಷ್ಠಿ ನಡೆಸಿದ ವಕೀಲ ಗಿರೀಶ್, ಘಟನೆ ವಿವರಿಸುತ್ತಾ “ನಾನು ನನ್ನ ಕುಟುಂಬದೊಡನೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದೆ. ದೇವರ ಉತ್ಸವದ ಹೆಸರಿನಲ್ಲಿ ರಸ್ತೆ ತಡೆದ ಕಾರಣದಿಂದ ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಧರ್ಮದ ಕೆಲಸ, ದೇವರ ಕೆಲಸ ಅಂತ ಹೇಳಿ ಸ್ವಲ್ಪ ಕಾಲ ಕಾಯ್ದು, ಬಳಿಕ ಸೌಮ್ಯವಾಗಿ ಸ್ಥಳದಲ್ಲೇ ಇದ್ದ ಪೊಲೀಸರನ್ನ ಮನವಿ ಮಾಡಿಕೊಂಡೆ. “ನಾನು ಪೊಲೀಸರೊಂದಿಗೆ ಮಾತನಾಡುತ್ತಿದ್ದ ವೇಳೆಯಲ್ಲೇ ಮನೀಶ್ ಗುರುಜಿ, ಅವರ ತಮ್ಮ ಹಾಗೂ ಅವರ ಗುಂಪು ಅಕಸ್ಮಿಕವಾಗಿ ಸ್ಥಳಕ್ಕೆ ಬಂದು ನನ್ನ ಮೇಲೂ, ನನ್ನ ತಂದೆ-ತಾಯಿಯ ಮೇಲೂ ಹಲ್ಲೆ ನಡೆಸಿದರು


ನೆಲಮಂಗಲದ ನಗರದ ಪ್ರವಾಸಿ ಮಂದಿರದಲ್ಲಿ ಮನೀಶ್ ಗುರುಜಿ ಹಾಗು ಸಂಗಡಿಗರನ್ನು ಬಂಧಿಸುವಂತೆ ಪತ್ರಿಕಾಗೋಷ್ಠಿ ನಡೆಸಿದ ಸಂತ್ರಸ್ತ ಗಿರೀಶ್ ಹಾಗೂ ಹಿಂದೂ ಪರ ಕಾರ್ಯಕರ್ತರು

ಉದ್ದಟತನ ತೋರಿದರು,” ಎಂದು ಗಿರೀಶ್ ತಿಳಿಸಿದರು. ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ, ಜಾತಿ ನಿಂದನೆಯೂ ನಡೆಸಿದರು,” ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಘಟನೆಯ ನಂತರ ಕುದೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಹಲ್ಲೆ, ಜಾತಿ ನಿಂದನೆ ಹಾಗೂ ಬೆದರಿಕೆ ಪ್ರಕರಣಗಳ ಅಡಿಯಲ್ಲಿ ಮನೀಶ್ ಗುರುಜಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ. “ಪೊಲೀಸರು ಎಫ್‌ಐಆರ್ ದಾಖಲಿಸಿದರೂ ಆರೋಪಿಗಳನ್ನು ಬಂಧಿಸದಿರುವುದು ನೋವುಂಟುಮಾಡಿದೆ. ಪ್ರಭಾವಿ


ಜಖಂಗೊಂಡಿರುವ ಗಿರೀಶ್ ಕಾರು

ವ್ಯಕ್ತಿಗಳೆಂಬ ನೆಪದಲ್ಲಿ ಕಾನೂನಿನ ಮುಂದೆ ತಪ್ಪಿತಸ್ಥರು ಮುಕ್ತವಾಗಿರುವುದು ಜನರ ವಿಶ್ವಾಸಕ್ಕೆ ಧಕ್ಕೆಯಾಗುತ್ತಿದೆ,” ಎಂದು ಅವರು ವಿದ್ರೋಪ ವ್ಯಕ್ತಪಡಿಸಿದರು.

ಈ ಕುರಿತು ಮುಖಂಡ ರಮೇಶ್ ಕೂಡ ಖಂಡನೆ ವ್ಯಕ್ತಪಡಿಸಿ “ಜನಸಾಮಾನ್ಯರ ದಾರಿಯನ್ನು ತಡೆದು ತೊಂದರೆ ಮಾಡುವುದು ತಪ್ಪು. ಅದನ್ನು ಪ್ರಶ್ನಿಸಿದವರಿಗೆ ಹಲ್ಲೆ ನಡೆಸುವುದು ಮತ್ತೊಂದು ಅಪರಾಧ. ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು,” ಎಂದು ತಿಳಿಸಿದ್ದಾರೆ. ಸ್ಥಳೀಯ ಮೂಲಗಳ ಪ್ರಕಾರ, ಮನೀಶ್ ಗುರುಜಿ ರಾಜಕೀಯ ನಾಯಕರ,


ಗಾಯಾಳು ಗಿರೀಶ್


ಆರೋಪಿ ಮನೀಶ್

ವಿಶೇಷವಾಗಿ ಬಿಜೆಪಿ ಮುಖಂಡರ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಇದೇ ವೇಳೆ ಚಿತ್ರರಂಗದ ಕೆಲ ನಟ-ನಟಿಯರು ಸಹ ಮನೀಶ್ ಗುರುಜಿಯ ಭಕ್ತರು ಎಂಬ ಮಾಹಿತಿ ಹೊರಬಂದಿರುವುದು ಹೊಸ ಚರ್ಚೆಗೆ ಕಾರಣವಾಗಿದೆ. ಈ ಘಟನೆ ಹಿನ್ನೆಲೆಯಲ್ಲಿ ಸ್ಥಳೀಯ ಜನರು ಹಾಗೂ ಹಿಂದೂ ಸಂಘಟನೆಗಳು ಆರೋಪಿಗಳ ತಕ್ಷಣದ ಬಂಧನ ಹಾಗೂ ಗಿರೀಶ್ ಕುಟುಂಬಕ್ಕೆ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿವೆ.

## ಗಾಂಧಿಗ್ರಾಮ ಸಹಕಾರ ಸಂಘದಲ್ಲಿ ಅಕ್ರಮ!?

### ಅಧ್ಯಕ್ಷ-ಕಾರ್ಯದರ್ಶಿಗಳ ವಿರುದ್ಧ ನಿರ್ದೇಶಕರ ಗಂಭೀರ ಆರೋಪ




ನೆಲಮಂಗಲ: ನೆಲಮಂಗಲ ತಾಲೂಕಿನ ಗಾಂಧಿಗ್ರಾಮ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದಲ್ಲಿ ಅಕ್ರಮ ನಡೆದಿರುವ ಆರೋಪಗಳು ಹೊರಬಿದ್ದಿವೆ. ಸಂಘದ ಅಧ್ಯಕ್ಷ ವೀರಮಾರೇಗೌಡ ಮತ್ತು ಕಾರ್ಯದರ್ಶಿ ಹನುಮಂತರಾಜು ಅವರು ಅಕ್ರಮ ಕಾರ್ಯಗಳಲ್ಲಿ ತೊಡಗಿದ್ದಾರೆ ಎಂದು ಸಂಘದ ನಿರ್ದೇಶಕರು ಗಂಭೀರ ಆರೋಪ ಮಾಡಿದ್ದಾರೆ.

ನಿರ್ದೇಶಕರ ಪ್ರಕಾರ, ಸಂಘದ ಹಣಕಾಸು ಮತ್ತು ನಿರ್ಧಾರಾತ್ಮಕ ವಿಚಾರಗಳಲ್ಲಿ ಸ್ಪಷ್ಟತೆ ಇಲ್ಲದಿರುವುದರ ಜೊತೆಗೆ, ಸಭೆಯ ನಡವಳಿ ಪುಸ್ತಕದಲ್ಲೂ ಅಕ್ರಮ ನಡೆದಿದೆ ಎನ್ನಲಾಗಿದೆ. ಅವರು ಸಭಾ ನಡವಳಿ ಪುಸ್ತಕದ ನಕಲು ಪ್ರತಿಯನ್ನು ನೀಡುವಂತೆ ಕಾರ್ಯದರ್ಶಿಗೆ ಹಲವು ಬಾರಿ ಮನವಿ ಮಾಡಿದರೂ, ಕಾರ್ಯದರ್ಶಿ ಹನುಮಂತರಾಜು ನಕಲು ನೀಡದೇ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.


ವೀರಮಾರೇಗೌಡ, ಅಧ್ಯಕ್ಷರು


ಹನುಮಂತರಾಜು, ಕಾರ್ಯದರ್ಶಿ

ತಾಲೂಕು ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘಕ್ಕೆ ಹೊಸ ಹೆಸರು ಸೂಚಿಸುವ ವಿಚಾರದಲ್ಲೂ ಅಕ್ರಮ ನಡೆದಿದೆ. ಹೆಸರು ಸೂಚಿಸುವ ಪ್ರಕ್ರಿಯೆಯಲ್ಲಿ ಸದಸ್ಯರ ಅಭಿಪ್ರಾಯ ಕೇಳದೇ, ಅಧ್ಯಕ್ಷ-ಕಾರ್ಯದರ್ಶಿಗಳು ತಮ್ಮ ಮನಸ್ಸಿನ ಪ್ರಕಾರ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಇದಲ್ಲದೆ, ಸಭಾ ನಡವಳಿ ಪುಸ್ತಕವನ್ನು ಅಧ್ಯಕ್ಷರ ಮನೆಯಲ್ಲಿ ಇಡುವುದು ಏಕೆ? ಎಂಬ ಪ್ರಶ್ನೆ ನಿರ್ದೇಶಕರಿಂದ ಕೇಳಿಬಂದಿದೆ. “ಸಂಘದ ದಾಖಲೆಗಳು ಕಚೇರಿಯಲ್ಲಿರಬೇಕಾದ್ದು. ಅಧ್ಯಕ್ಷರ ಮನೆಯಲ್ಲಿ ನಡವಳಿ ಪುಸ್ತಕ ಇರೋದೇ ಅಕ್ರಮಕ್ಕೆ ಸಾಕ್ಷಿ,” ಎಂದು ನಿರ್ದೇಶಕ ಆರ್. ಮಂಜುನಾಥ್ ಆರೋಪಿಸಿದರು.

ನ್ಯಾಯಕ್ಕಾಗಿ, ಸಂಘದ ಐದು ಮಂದಿ ನಿರ್ದೇಶಕರು ಸಂಘದ ಕಚೇರಿ ಮುಂದೆ ಧರಣಿ ಕುಳಿತು ಪ್ರತಿಭಟನೆ ನಡೆಸಿದರು.

## ಮೆಟ್ರೋ ನಿಲ್ದಾಣಕ್ಕೆ ‘ಬಸವಣ್ಣ’ ಹೆಸರು ಶಿಫಾರಸು

### ಕೇಂದ್ರಕ್ಕೆ ಮನವಿ ಸಲ್ಲಿಸುವುದಾಗಿ ಸಿಎಂ ಭರವಸೆ



ಬೆಂಗಳೂರು: “ನಮ್ಮ ಮೆಟ್ರೋ ನಿಲ್ದಾಣಕ್ಕೆ ಬಸವಣ್ಣನವರ ಹೆಸರು ನಾಮಕರಣಕ್ಕೆ ಕೇಂದ್ರಕ್ಕೆ ಶಿಫಾರಸು ಮಾಡುತ್ತೇವೆ,” ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಅವರು ಈ ಭರವಸೆ ನೀಡಿದ್ದು, ‘ಬಸವ ಸಂಸ್ಕೃತಿ ಅಭಿಯಾನ-2025’ರ ಸಮಾರೋಪ ಸಮಾರಂಭದ ವೇಳೆ — ವಿಶ್ವಗುರು ಬಸವಣ್ಣರನ್ನು “ಕರ್ನಾಟಕದ ಸಾಂಸ್ಕೃತಿಕ ನಾಯಕ” ಎಂದು ಘೋಷಿಸಿದ ವರ್ಷಾಚರಣೆ ಅಂಗವಾಗಿ ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಈ ಮಹಾ ಸಮಾರಂಭದಲ್ಲಿ.

ಕಾರ್ಯಕ್ರಮದಲ್ಲಿ ಶರಣ ಸಂಸ್ಕೃತಿಯ 301 ಶರಣರು, ಗುರುಗಳು, ಸ್ವಾಮೀಜಿಗಳು ಸೇರಿದಂತೆ ಲಿಂಗಾಯತ ಧರ್ಮದ ಚಳವಳಿಯ ಪ್ರಮುಖರು, ಪ್ರಗತಿಪರ ಚಿಂತಕರು, ಹೋರಾಟಗಾರರು ಹಾಗೂ 2 ಲಕ್ಷಕ್ಕೂ ಅಧಿಕ ಶರಣಾನುಯಾಯಿಗಳು ಭಾಗವಹಿಸಿದ್ದರು. ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭವ್ಯವಾಗಿ ಸನ್ಮಾನಿಸಲಾಯಿತು ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದ ಸಿಎಂ ಸಿದ್ದರಾಮಯ್ಯ, “ಅನುಭವ ಮಂಟಪದ ನಿರ್ಮಾಣವನ್ನು ಮುಂದಿನ ವರ್ಷದೊಳಗೆ ಪೂರ್ಣಗೊಳಿಸುತ್ತೇವೆ. ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ ಬೇಡಿಕೆ ಬಂದಿದೆ, ಅದನ್ನೂ ಮುಂದಿನ ವರ್ಷದಿಂದಲೇ ಆರಂಭಿಸುತ್ತೇವೆ. ನಾನು ಕೊಡುವ ಮಾತು ನಡೆಸಿ ಕೊಡುತ್ತೇನೆ,” ಎಂದು ಭರವಸೆ ನೀಡಿದರು.

ಭಾಷಣದ ವೇಳೆ ಪ್ರೇಕ್ಷಕರಿಂದ ಮೆಟ್ರೋ ನಿಲ್ದಾಣಕ್ಕೆ ಬಸವಣ್ಣನವರ ಹೆಸರಿಡಲು ಆಗ್ರಹ ವ್ಯಕ್ತವಾದಾಗ ಸಿಎಂ ಪ್ರತಿಕ್ರಿಯಿಸಿದರು: “ನಮ್ಮ ಮೆಟ್ರೋ ನಿಲ್ದಾಣದಲ್ಲಿ ರಾಜ್ಯದ ಪಾಲು ಹೆಚ್ಚು ಇರಬಹುದು, ಆದರೆ ಅಂತಿಮ ನಿರ್ಧಾರ ಕೇಂದ್ರ ಸರ್ಕಾರದ ಕೈಯಲ್ಲಿದೆ. ಆದರೂ ನಾವು ಬಸವಣ್ಣನವರ ಹೆಸರನ್ನು ಶಿಫಾರಸು ಮಾಡುತ್ತೇವೆ. ಅದು ನಮ್ಮ ಕೈಯಲ್ಲಿ ಇದ್ದರೆ ಇದೇ ವೇದಿಕೆಯಿಂದ ಒಪ್ಪಿಗೆ ಕೊಡುತ್ತಿದ್ದೆ,” ಎಂದು ಹೇಳಿದರು. ಸಿದ್ದರಾಮಯ್ಯ ತಮ್ಮ ಭಾಷಣದಲ್ಲಿ ಬಸವಣ್ಣನವರ ವಿಚಾರಧಾರೆಗಳ ಮಹತ್ವವನ್ನು ಹಿಗ್ಗಾಮುಗ್ಗವಾಗಿ ವಿವರಿಸಿದರು. “ನಾನು ಬಸವಣ್ಣನ ಅಭಿಮಾನಿ. ಅವರ ತತ್ವ ಸಿದ್ಧಾಂತಗಳಲ್ಲಿ ನಂಬಿಕೆ ಮತ್ತು ಬದ್ಧತೆ ಇಟ್ಟುಕೊಂಡವನು. ನಮ್ಮ ಸರ್ಕಾರ ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕನನ್ನಾಗಿ ಘೋಷಿಸಿದೆ — ಇದು ಇಡೀ ಸರ್ಕಾರದಿಂದ ಬಸವಣ್ಣನವರಿಗೆ ಸಲ್ಲಿಸಿದ ಗೌರವ,” ಎಂದರು. ಸಮಾಜದಲ್ಲಿ ಅಸಮಾನತೆ, ಜಾತಿ ಮತ್ತು ಮೇಲುಕೀಳು ವ್ಯವಸ್ಥೆ ಕುರಿತಂತೆ ಮಾತನಾಡಿದ ಸಿಎಂ, “ನಾವೆಲ್ಲರೂ ಒಂದೇ — ನಾವೆಲ್ಲರೂ ಶೂದ್ರರು. ಜಾತಿಯಿಂದ ಯಾರೂ ಶ್ರೇಷ್ಠರಾಗಲ್ಲ, ಜ್ಞಾನ ಯಾರ ಸ್ವತ್ತೂ ಅಲ್ಲ. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು, ಅಸಮಾನತೆ ತೊಲಗಿಸಬೇಕು,” ಎಂದು ಜನರಲ್ಲಿ ಸಮಾನತೆಯ ಸ್ಫೂರ್ತಿ ತುಂಬಿದರು.

ಅವರು ಮುಂದುವರಿದು, “ಸಮಾಜದಲ್ಲಿ ಸಹಿಷ್ಣುತೆ ಮತ್ತು ಸಹಬಾಳ್ವೆ ಬೆಳೆಸುವ ಪ್ರಯತ್ನ ಎಲ್ಲರೂ ಮಾಡಬೇಕು. ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲ — ಅದಕ್ಕಾಗಿಯೇ ಬಸವಣ್ಣ ಹೊಸ ಧರ್ಮವನ್ನು ಹುಟ್ಟುಹಾಕಿದರು. ಅವರ ವಿಚಾರಗಳನ್ನು ಪಾಲಿಸಿದರೆ ಮಾತ್ರ ಸಮಾಜ ಬದಲಾವಣೆಯಾಗುತ್ತದೆ,” ಎಂದು ಕರೆ ನೀಡಿದರು.

## ಕೆಂಪೇಗೌಡ ಸ್ಮಾರಕಗಳಿಗೆ ₹103 ಕೋಟಿ ಅನುದಾನ: ಡಿ.ಕೆ. ಶಿವಕುಮಾರ್



ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಸ್ಮಾರಕಗಳ ಪುನರುಜ್ಜೀವನ ಹಾಗೂ ಅವರ ಹೆಸರಿನಲ್ಲಿ ನಗರ ವಿನ್ಯಾಸ ಕಾಲೇಜು ಸ್ಥಾಪನೆಗೆ ರಾಜ್ಯ ಸರ್ಕಾರದಿಂದ ಭಾರೀ ಅನುದಾನ ಘೋಷಿಸಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಈ ಕುರಿತು ವಿವರ ನೀಡಿದರು.

ಡಿ.ಕೆ.ಶಿವಕುಮಾರ್ ಅವರು ಮಾತನಾಡುತ್ತಾ, “ನಾಡಪ್ರಭು ಕೆಂಪೇಗೌಡರ ಎಲ್ಲ ಸ್ಮಾರಕಗಳ ಪುನರುಜ್ಜೀವನಕ್ಕೆ ₹103 ಕೋಟಿ ಅನುದಾನ ಮೀಸಲಿಡಲಾಗಿದೆ. ಜೊತೆಗೆ ಅವರ ಹೆಸರಿನಲ್ಲಿ ನಗರ ವಿನ್ಯಾಸ ಕಾಲೇಜು ಸ್ಥಾಪನೆಗೆ ₹100 ಕೋಟಿ ಅನುದಾನ ನೀಡಲಾಗಿದೆ. ಮಾಗಡಿ ಕೋಟೆಯ ಪುನರುಜ್ಜೀವನ ಕಾರ್ಯ ಶೇ.50ರಷ್ಟು ಪೂರ್ಣಗೊಂಡಿದೆ. ಕೆಂಪೇಗೌಡರ ಸಮಾಧಿ ಪ್ರದೇಶದ 10 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳುವ ಕೆಲಸದಲ್ಲಿದ್ದು, ಶೇ.90 ಭಾಗ ಮುಗಿದಿದೆ,” ಎಂದು ಹೇಳಿದರು. ಅವರು ಮುಂದುವರಿದು, “ಸುಮ್ಮನಹಳ್ಳಿಯ ಬಳಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಭವನಕ್ಕೆ ಅತ್ಯುತ್ತಮ ವಿನ್ಯಾಸ ನೀಡಲು ವಾಸ್ತುಶಿಲ್ಪಿಗಳಿಂದ ವಿನ್ಯಾಸ ಆಹ್ವಾನಿಸಲಾಗಿದೆ. ನಗರ ವಿನ್ಯಾಸ ಕಾಲೇಜಿನಲ್ಲಿ ಸುಮಾರು 300 ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ವ್ಯವಸ್ಥೆ ರೂಪಿಸಲಾಗಿದೆ. ವಿಟಿಯು ಪಠ್ಯಕ್ರಮ ಅಳವಡಿಸುವ ಬಗ್ಗೆ ಚರ್ಚೆ ನಡೆಯಲಿದೆ,” ಎಂದರು.

**ನಗರಾಭಿವೃದ್ಧಿ ಇಲಾಖೆ-ಕೆಂಪೇಗೌಡ ಪ್ರಾಧಿಕಾರ-ಜಿಬಿಎ ಸಹಯೋಗ:** “ನಗರ ವಿನ್ಯಾಸ ಅಧ್ಯಯನ ಮಾಡಿದವರಿಗೆ ಬಿಬಿಎಂಪಿ ಮತ್ತು ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತದೆ. ಕಾಲೇಜು ನಿರ್ಮಾಣಕ್ಕಾಗಿ ನಗರಾಭಿವೃದ್ಧಿ ಇಲಾಖೆ, ಕೆಂಪೇಗೌಡ ಪ್ರಾಧಿಕಾರ ಮತ್ತು ಜಿಬಿಎ ಸಂಯುಕ್ತವಾಗಿ ನಿಧಿ ನೀಡಲಿದೆ. ಏರ್‌ಪೋರ್ಟ್ ಬಳಿಯ ಕೆಂಪೇಗೌಡ ಪ್ರತಿಮೆ ಬಳಿ ಥೀಮ್ ಪಾರ್ಕ್ ನಿರ್ಮಾಣದ ಜವಾಬ್ದಾರಿ ಕೃಷ್ಣ ಬೈರೇಗೌಡರಿಗೆ ನೀಡಲಾಗಿದೆ,” ಎಂದು ತಿಳಿಸಿದ್ದಾರೆ.

**ಕಸ ನಿರ್ವಹಣೆ ಹಾಗೂ ರಸ್ತೆ ದುರಸ್ತಿ ಕುರಿತು ಸೂಚನೆ:** “ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮತ್ತು ದುರಸ್ತಿ ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ. ದಸರಾ ರಜೆಯ ಹಿನ್ನೆಲೆಯಲ್ಲಿ ಕಸದ ಸಮಸ್ಯೆ ಹೆಚ್ಚಾದ್ದರಿಂದ ಶೀಘ್ರ ಪರಿಹಾರಕ್ಕಾಗಿ ಅಭಿಯಾನ ಆರಂಭಿಸುತ್ತೇವೆ. ಕಟ್ಟಡ ತ್ಯಾಜ್ಯ ಎಸೆಯುವವರ ವಿರುದ್ಧ ಪ್ರಕರಣ ದಾಖಲಿಸಲು ಪೊಲೀಸರಿಗೆ ಸೂಚನೆ ನೀಡಿದ್ದೇನೆ. ಕಟ್ಟಡ ತ್ಯಾಜ್ಯವನ್ನು ತಕ್ಷಣ ವಿಲೇವಾರಿ ಮಾಡಲಾಗುತ್ತದೆ,” ಎಂದು ಡಿಸಿಎಂ ಹೇಳಿದರು.

## ಮಗಳನ್ನು ಕೊಂದು ಶವದ ಮೇಲೆ ನಿಂತು ಆತ್ಮಹತ್ಯೆ ಮಾಡಿಕೊಂಡ ತಾಯಿ


ಶೃತಿ


ಪೂರ್ವಿಕಾ

ಶಿವಮೊಗ್ಗ: ನಗರದಲ್ಲಿನ ಮೆಗ್ಗಾನ್ ಆಸ್ಪತ್ರೆಯ ನರ್ಸಿಂಗ್ ಕ್ವಾಟ್ರಸ್‌ನಲ್ಲಿ ಅತಿ ಭೀಕರ ಘಟನೆ ನಡೆದಿದೆ. ಶೃತಿ (38) ಎಂಬ ಮಹಿಳೆ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದರು; ಆತ್ಮಹತ್ಯೆಗೂ ಮುನ್ನ ತಮ್ಮ 6ನೇ ತರಗತಿಯ ಮಗಳು ಪೂರ್ವಿಕಾಳನ್ನು ಹಲ್ಲೆ ಮಾಡಿದ್ದಾಳೆ. ನಂತರ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಘಟನೆಯ ವಿವರಗಳ ಪ್ರಕಾರ, ಶೃತಿ ಮಗಳ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ ಬಳಿಕ, ದೇಹದ ಮೇಲೆ ನಿಂತುಕೊಂಡಿದ್ದ ಪ್ಯಾನ್‌ನಲ್ಲಿ ನೇಣು ಬಿಗಿದುಕೊಂಡು ತಮ್ಮ ಜೀವನಕ್ಕೆ ಅಂತ್ಯ ತಂದಿದ್ದಾಳೆ. ಶೃತಿ ಹಿಂದೆ ಮನುಷ್ಯರು ನೀಡುವ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಮಹಿಳೆಯ ಪತಿ ರಾಮಣ್ಣ ಮೆಗ್ಗಾನ್ ಆಸ್ಪತ್ರೆಯಲ್ಲಿ ನೈಟ್ ಶಿಫ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಬೆಳಗ್ಗೆ ಕೆಲಸ ಮುಗಿಸಿ ಕ್ವಾಟ್ರಸ್ಗೆ ಬಂದಾಗ ಈ ದುರಂತ ಘಟನೆ ಬೆಳಕಿಗೆ ಬಂದಿದೆ. ಸ್ಥಳಕ್ಕೆ ಸ್ಥಳೀಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸ್ಥಳೀಯರು ಈ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಶೃತಿ ಮತ್ತು ಅವರ ಕುಟುಂಬದ ಬಗ್ಗೆ ಸೂಕ್ತ ಮಾನಸಿಕ ಆರೋಗ್ಯ ಬೆಂಬಲ ನೀಡದಿರುವುದರಿಂದ ಈ ರೀತಿಯ ಭೀಕರ ಘಟನೆ ಸಂಭವಿಸಬಹುದೆಂದು ಅಧಿಕಾರಿಗಳು ಹೇಳಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಶೃತಿ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದುದಾಗಿ ದೃಢಪಟ್ಟಿದೆ. ಈ ಘಟನೆ ಸಾರ್ವಜನಿಕರಲ್ಲಿ ಗಂಭೀರ ಆತಂಕ ಉಂಟುಮಾಡಿದ್ದು, ಮನೋವೈಜ್ಞಾನಿಕ ಸಮಸ್ಯೆಗಳಿಗೆ ತಕ್ಷಣ ಸೂಕ್ತ ಚಿಕಿತ್ಸೆ ನೀಡುವ ಮಹತ್ವವನ್ನು ಮತ್ತೊಮ್ಮೆ ಎಚ್ಚರಿಸಿದೆ.

## ರಾಷ್ಟ್ರಪತಿಭವನದಲ್ಲಿ ‘ಕಾಂತಾರ’ ಪ್ರದರ್ಶನ: ರಿಷಬ್ ಶೆಟ್ಟಿ ತಂಡದ ಜೊತೆ ದ್ರೌಪದಿ ಮುರ್ಮು ವೀಕ್ಷಣೆ




ಬೆಂಗಳೂರು: ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸಿರುವ ಕಾಂತಾರ ಚಾಪ್ಟರ್ 1 ಸಿನಿಮಾ ಭರ್ಜರಿ ಪ್ರದರ್ಶನ ಕಂಡಿದ್ದು, ಪ್ರಸಕ್ತ ಭಾನುವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರಪತಿಭವನದಲ್ಲಿ ಈ ಚಿತ್ರ ವೀಕ್ಷಿಸಲಿದ್ದಾರೆ. ನಟಿ ರುಕ್ಮಿಣಿ ವಸಂತ್ ಮತ್ತು ನಿರ್ಮಾಪಕ ಚಲುವೆ ಗೌಡ ಕೂಡ ಚಿತ್ರತಂಡದೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಪ್ರದರ್ಶನದ ಬಳಿಕ ರಾಷ್ಟ್ರಪತಿಗಳು ಚಿತ್ರತಂಡವನ್ನು ಗೌರವಿಸಲಿದ್ದಾರೆ.

ಬೃಹತ್ ಹೌಸ್‌ಫುಲ್ ಪ್ರತಿಕ್ರಿಯೆ ಮತ್ತು ಪ್ರೇಕ್ಷಕರ ಭರ್ಜರಿ ಪಡೆದ ಕಾಂತಾರ ಚಾಪ್ಟರ್ 1 ಬಿಡುಗಡೆನಂತರ ಮೊದಲ ಮೂರು ದಿನಗಳಲ್ಲಿ 160 ಕೋಟಿ ರೂಪಾಯಿ ಗಳಿಕೆ ದಾಖಲಿಸಿದ್ದು, ಕನ್ನಡ ಚಿತ್ರರಂಗದ ದಾಖಲೆ ನಿರ್ಮಿಸಿದೆ. ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ಅಡಿ ವಿಜಯ್ ಕಿರಗಂದೂರು ಮತ್ತು ಚಲುವೆ ಗೌಡ ನಿರ್ಮಿಸಿದ್ದಾರೆ.

ಸ್ಟಾರ್ ನಟರು, ನಿರ್ದೇಶಕರು ಮತ್ತು ರಾಜಕಾರಣಿಗಳು ಚಿತ್ರದ ವಿಭಿನ್ನ ಕಥಾನಕ, ದೃಶ್ಯ ವಿನ್ಯಾಸ ಮತ್ತು ತಂತ್ರಜ್ಞಾನಕ್ಕಾಗಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಕನ್ನಡಿಗರಲ್ಲಿ ಸಿನಿಮಾ ಬಗ್ಗೆ ಉತ್ಸಾಹ ಹೆಚ್ಚಿಸಲು ನಾರಾಯಣ ಗೌಡ ಮತ್ತು ಹಲವು ಚಿತ್ರರಂಗ ಕಾರ್ಯಕರ್ತರು ಪ್ರೇಕ್ಷಕರಿಗೆ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸುವಂತೆ ಮನವಿ ಮಾಡಿದ್ದಾರೆ. ಕಾಂತಾರ ಚಾಪ್ಟರ್ 1’ನ ಯಶಸ್ಸು ಕನ್ನಡ ಚಿತ್ರರಂಗದ ಹೊಸ ಮಾನದಂಡವನ್ನು ಸ್ಥಾಪಿಸಿದೆ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟಿದ್ದಾರೆ.

## ಮೆಟ್ರೋ ಹಳಿಗೆ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ ಯುವಕ

ಬೆಂಗಳೂರು: ನಮ್ಮ ಮೆಟ್ರೋದಲ್ಲಿ ಪ್ರಯಾಣಿಕನೊಬ್ಬ ಆತ್ಮಹತ್ಯೆಗೆ ಯತ್ನಿಸಿ ರೈಲಿನಡಿ ಸಿಲುಕಿಕೊಂಡ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ (ಮೆಜೆಸ್ಟಿಕ್)ದಲ್ಲಿ ಮಧ್ಯಾಹ್ನ 3:15ರ ಸುಮಾರಿಗೆ ಈ ಘಟನೆ ನಡೆದಿದ್ದು, ಮೆಟ್ರೋ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಪ್ಲಾಟ್‌ಫಾರಂ 3ರಲ್ಲಿ ಏಕಾಏಕಿ ಹಳಿಗೆ ಜಿಗಿದ ವ್ಯಕ್ತಿ ರೈಲಿನ ಕೆಳಗೆ ಸಿಕ್ಕಿ ಹಾಕಿಕೊಂಡು ಪರದಾಡುತ್ತಿದ್ದನು. ಸದ್ಯ ಅವನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೆಟ್ರೋ ಸೇವೆಗಳು ಮತ್ತೆ ಆರಂಭವಾಗಿವೆ.

ಮಧ್ಯಾಹ್ನ 3:15ರಿಂದ 3:30ರ ನಡುವೆ ನಡೆದ ಈ ಘಟನೆಯಲ್ಲಿ, ಸುಮಾರು 25-26 ವರ್ಷದ ಯುವಕನೊಬ್ಬ ಮಾದಾವರದಿಂದ ಸಿಲ್ಕ್ ಇನ್‌ಸ್ಟಿಟ್ಯೂಟ್‌ಗೆ ಹೋಗುವ ಹಸಿರು ಮಾರ್ಗದ ಮೆಟ್ರೋ ಹಳಿಗೆ ಜಿಗಿದಿದ್ದಾನೆ. ಪ್ಲಾಟ್‌ಫಾರಂ 3ರಲ್ಲಿ ನಿಂತಿದ್ದ ರೈಲಿಗೆ ಹಾರಿದ ಅವನು ನೇರವಾಗಿ ಹಳಿಯ ಮೇಲೆ ಬಿದ್ದು, ರೈಲು ಅಲ್ಲೇ ನಿಂತುಹೋಯಿತು. ಸಿಲುಕಿಕೊಂಡ ವ್ಯಕ್ತಿ ಸ್ಥಿತಿ ಗಂಭೀರವಾಗಿದ್ದು, ಮೆಟ್ರೋ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದ ಸಹಾಯದಿಂದ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು. ಸುಮಾರು 30 ನಿಮಿಷಗಳ ಕಾಲ ಸಂಚಾರ ಸ್ಥಗಿತಗೊಂಡಿತ್ತು, ಇದರಿಂದಾಗಿ ಸಾವಿರಾರು ಪ್ರಯಾಣಿಕರು ಪರದಾಡುವಂತಾಯಿತು.

ಹಸಿರು ಮಾರ್ಗದಲ್ಲಿ ನಡೆದ ಈ ಘಟನೆಯಿಂದಾಗಿ ಮಾದಾವರ-ಸಿಲ್ಕ್ ಇನ್‌ಸ್ಟಿಟ್ಯೂಟ್ ಮಾರ್ಗದಲ್ಲಿ ತಾತ್ಕಾಲಿಕ ಅಡಚಣೆ ಉಂಟಾಯಿತು. ಮೆಟ್ರೋ ಅಧಿಕಾರಿಗಳ ಪ್ರಕಾರ, ಆತ್ಮಹತ್ಯೆ ಯತ್ನದ ಹಿನ್ನೆಲೆಯಲ್ಲಿ ವ್ಯಕ್ತಿಯನ್ನು ರಕ್ಷಿಸಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಗಿದೆ. ಅವನ ಸ್ಥಿತಿ ಗಂಭೀರವಾಗಿದ್ದರೂ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# ವರದಕ್ಷಿಣೆ ಕಿರುಕುಳ ತಾಳಲಾರದೆ ಗೃಹಿಣಿ ಆತ್ಮಹತ್ಯೆ



ಬೆಂಗಳೂರು: ಬೆಂಗಳೂರು ಹೊರವಲಯದ ತಲಘಟ್ಟಪುರದ ಅವಲಹಳ್ಳಿಯಲ್ಲಿ ನಡೆದ ದಾರುಣ ಘಟನೆ ಒಂದು ಕುಟುಂಬದ ಜೀವನವನ್ನೇ ನಾಶಮಾಡಿದೆ. ವರದಕ್ಷಿಣೆ ಕಿರುಕುಳ ಮತ್ತು ಮಾನಸಿಕ ಒತ್ತಡದಿಂದ ಬಳಲುತ್ತಿದ್ದ ಗೃಹಿಣಿ ನವ್ಯ (28) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಘಟನೆ ಕುರಿತು ನವ್ಯರ ಕುಟುಂಬದಿಂದ ಪತಿ ಶೈಲೇಶ್ ವಿರುದ್ಧ ಗಂಭೀರ ಆರೋಪಗಳು ಹೊರಬಿದ್ದಿದ್ದು, ಪ್ರಕರಣ ಇದೀಗ ತನಿಖೆಯಹಂತದಲ್ಲಿದೆ.

ನವ್ಯ ಮತ್ತು ಶೈಲೇಶ್‌ರ ವಿವಾಹವು ಸುಮಾರು ನಾಲ್ಕು ವರ್ಷಗಳ ಹಿಂದೆ ನಡೆದಿತ್ತು. ಶೈಲೇಶ್ ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದರೂ, ದಾಂಪತ್ಯ ಜೀವನದಲ್ಲಿ ಸಂತೋಷ ಇರಲಿಲ್ಲ ಎಂದು ಮೂಲಗಳು ತಿಳಿಸಿವೆ. ಇತ್ತೀಚಿನ ದಿನಗಳಲ್ಲಿ ಶೈಲೇಶ್ ಹಾಗೂ ಆತನ ಕುಟುಂಬಸ್ಥರು ನವ್ಯಗೆ ವರದಕ್ಷಿಣೆಗಾಗಿ ನಿರಂತರ ಒತ್ತಡ ಹೇರಿದ್ದರು ಎನ್ನುವ ಆರೋಪವಿದೆ. ಈ ಕಿರುಕುಳದಿಂದಾಗಿ ನವ್ಯ ಮಾನಸಿಕವಾಗಿ ಅಸ್ಥಿರಳಾಗಿ, ಆತ್ಮಹತ್ಯೆಗೆ ದಾರಿಯಾಗಿದ್ದಾಳೆ ಎಂದು ಶಂಕಿಸಲಾಗಿದೆ.

ಘಟನೆಯ ದಿನದ ಬೆಳಿಗ್ಗೆ ನವ್ಯ ಮನೆಯಲ್ಲಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಪತಿ ಶೈಲೇಶ್ ತಕ್ಷಣ ಆಕೆಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದ. ಆದರೆ, ವೈದ್ಯಕೀಯ ಚಿಕಿತ್ಸೆ ಫಲಕಾರಿಯಾಗದೆ ಆಕೆ ಮೃತಪಟ್ಟಿದ್ದಾಳೆ. ಕುಟುಂಬಸ್ಥರ ಪ್ರಕಾರ, ಇದು ಕೇವಲ ಆತ್ಮಹತ್ಯೆಯಾಗಿರದೇ, ನವ್ಯಗೆ ಉದ್ದೇಶಪೂರ್ವಕವಾಗಿ ಮಾನಸಿಕವಾಗಿ ಹಿಂಸೆ ನೀಡಿ ಕೊಲೆ ಮಾಡಿದ ಪ್ರಕರಣವಾಗಿದೆ ಎಂದು ಅವರು ಪೊಲೀಸರಿಗೆ ತಿಳಿಸಿದ್ದಾರೆ

ಈ ಹಿನ್ನೆಲೆಯಲ್ಲಿ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಶೈಲೇಶ್ ವಿರುದ್ಧ ಕೊಲೆ ಮತ್ತು ವರದಕ್ಷಿಣೆ ಕಿರುಕುಳ ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ಘಟನೆಯ ನಿಜಸ್ವರೂಪ ಬಹಿರಂಗವಾಗಲು ತನಿಖೆ ಮುಂದುವರಿಸುತ್ತಿದ್ದಾರೆ.

ನವ್ಯರ ಅಕಾಲಿಕ ಸಾವು ಸ್ಥಳೀಯರಲ್ಲಿ ಆಕ್ರೋಶ ಉಂಟುಮಾಡಿದ್ದು, ಮಹಿಳೆಯರ ಮೇಲಿನ ವರದಕ್ಷಿಣೆ ಕಿರುಕುಳ ಪ್ರಕರಣಗಳ ಬಗ್ಗೆ ಮತ್ತೊಮ್ಮೆ ಚರ್ಚೆಗೆ ಕಾರಣವಾಗಿದೆ. ನವ್ಯಗೆ ನ್ಯಾಯ ಸಿಗಬೇಕು ಎಂಬ ಕೂಗು ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಗಟ್ಟಿಯಾಗಿ ಮೊಳಗುತ್ತಿದೆ.

# ಕೆರೆಯಲ್ಲಿ ಈಜಲು ಹೋಗಿ ಮೂರು ಬಾಲಕರು ಮುಳುಗಿ ಸಾವು





ಚಿಕ್ಕಬಳ್ಳಾಪುರ: ಬಾಗೇಪಲ್ಲಿ ತಾಲ್ಲೂಕಿನ ಅಚೇಪಲ್ಲಿ ಗ್ರಾಮದಲ್ಲಿ ದಸರಾ ರಜೆಯ ಸಂದರ್ಭದಲ್ಲಿ ನಡೆದ ಭೀಕರ ಘಟನೆ ಗ್ರಾಮಸ್ಥರ ಮನಸ್ಸು ಶೋಕದಲ್ಲಿ ಮುಳುಗಿಸಿದೆ. ದಸರಾ ರಜೆ ಹಿನ್ನೆಲೆಯಲ್ಲಿ ಶಾಲೆಗಳು ಮುಕ್ತವಾಗಿದ್ದುದರಿಂದ, ಸ್ಥಳೀಯ ಹತ್ತಿರದ ಕೆರೆಯಲ್ಲಿ ಈಜಲು ಮೂವರು ಬಾಲಕರು ಹೋಗಿದ್ದರು. ದುರ್ಘಟನೆಯಾಗಿರುವ ಮಕ್ಕಳು ವಿಷ್ಣು (14), ನಿಹಾಲ್ ರಾಜ್ (12) ಮತ್ತು ಹರ್ಷವರ್ಧನ್ (16) ಎಂದು ಗುರುತಿಸಲಾಗಿದೆ. ಪ್ರಾಥಮಿಕ ವರದಿ ಹೇಳುವಂತೆ, ಮೊದಲಿಗೆ ವಿಷ್ಣು ಮತ್ತು ನಿಹಾಲ್ ಕೆರೆಯಲ್ಲಿ ಈಜುತ್ತಿದ್ದಾಗ, ಅವರು ನೀರಿನಲ್ಲಿ ಮುಳುಗುತ್ತಿರುವುದನ್ನು ಹರ್ಷವರ್ಧನ್ ಗಮನಿಸಿ ಅವರನ್ನು ರಕ್ಷಿಸಲು ನೀರಿನಲ್ಲಿ ಹಾರಿದ್ದರು. ಆದರೆ, ತೀವ್ರ ನೀರಿನ ಪ್ರಭಾವ ಮತ್ತು ಆಕಸ್ಮಿಕ ಪರಿಸ್ಥಿತಿಗಳ ಕಾರಣದಿಂದ ಮೂವರೂ ಮುಳುಗಿ ಸಾವನ್ನಪ್ಪಿದ್ದಾರೆ.

ಈ ದುಃಖದ ಘಟನೆ ವರ್ತಮಾನದಲ್ಲಿ ಮಕ್ಕಳ ಪೋಷಕರಿಗೆ ಅತೀವ ದುಃಖ ತಂದುಕೊಟ್ಟಿದೆ. ಮೂವರನ್ನು ಕಳೆದುಕೊಂಡ ಪೋಷಕರು ಅಸಹ್ಯವಾದ ನೋವಿನಿಂದ ಜಖಿತರಾಗಿದ್ದು, ತಮ್ಮ ಮಕ್ಕಳನ್ನು ಉಳಿಸಿಕೊಳ್ಳಲು ತಮ್ಮ ಶಕ್ತಿಯನ್ನು ಸಪ್ತವ್ಯವಹರಿಸಲು ಸಾಧ್ಯವಾಗದೆ ನಡೆದ ಈ ದುರ್ಘಟನೆ ಅವರನ್ನು ಮನಃಪೂರ್ವಕವಾಗಿ ನಿಷ್ಪ್ರಭೆ ಮಾಡಿದೆ. ಘಟನೆ ಬಳಿಕ ಸ್ಥಳೀಯರು ಕೂಡ ಕಂಗಾಲಾಗಿದ್ದು, ಗ್ರಾಮ ಸಮುದಾಯದಲ್ಲಿ ಶೋಕ ವಾತಾವರಣವೇ ಮನಸ್ಸಿಗೆ ಪ್ರಭಾವ ಬೀರುತ್ತಿದೆ.

ಮೂವರು ಬಾಲಕರ ಮೃತದೇಹಗಳನ್ನು ತಕ್ಷಣ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಬಾಗೇಪಲ್ಲಿ ಶಾಸಕ ಎಸ್ ಎನ್ ಸುಬ್ಬಾರೆಡ್ಡಿ ಸ್ಥಳಕ್ಕೆ ತೆರಳಿ ಆಸ್ಪತ್ರೆಯಲ್ಲಿ ಮೃತರ ಕುಟುಂಬಸ್ಥರನ್ನು ಭೇಟಿಯಾಗಿ ವೈಯಕ್ತಿಕವಾಗಿ ಸಂತಾಪ ಸೂಚಿಸಿದ್ದಾರೆ. ಅವರು ಕುಟುಂಬದ ಎದುರಿನ ದುಃಖವನ್ನು ಹಂಚಿಕೊಂಡು, ತಕ್ಷಣ 1 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಜೊತೆಗೆ, ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೂಡ ಕುಟುಂಬಕ್ಕೆ ಸಹಾಯ ನೀಡುವ ಭರವಸೆ ನೀಡಲಾಗಿದೆ.

ಘಟನೆಯ ನಂತರ, ಗ್ರಾಮಸ್ಥರು ಮತ್ತು ಸ್ಥಳೀಯ ಅಧಿಕಾರಿಗಳು ಮಕ್ಕಳ ಸುರಕ್ಷತೆ ಮತ್ತು ನೀರಿನ ಪ್ರದೇಶಗಳಲ್ಲಿ ನಡೆಯುವ ಆಟದ ಸಂದರ್ಭದಲ್ಲಿ ತಕ್ಕ ಜಾಗೃತಿ ಅಗತ್ಯತೆ ಬಗ್ಗೆ ಚರ್ಚೆ ನಡೆಸಿದ್ದಾರೆ. ಶಾಲಾ ಅಧ್ಯಾಪಕರು ಮತ್ತು ಪಾಲಕರು ಕೂಡ ತಮ್ಮ ಮಕ್ಕಳಿಗೆ ನೀರಿನಲ್ಲಿನ ಅತಿರೇಕದ ಅಪಾಯಗಳನ್ನು ತಿಳಿಸಿ, ಭವಿಷ್ಯದಲ್ಲಿ ಈ ರೀತಿಯ ದುರ್ಘಟನೆಗಳಾಗದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾರೆ.

ಸಂಸ್ಥೆಗಳು, ಶಾಲೆಗಳು ಮತ್ತು ಅಧಿಕಾರಿಗಳು ಸೇರಿಕೊಂಡು ಮಕ್ಕಳಿಗೆ ಈ ರೀತಿಯ ಪರಿಸ್ಥಿತಿಗಳಲ್ಲಿ ಸುರಕ್ಷಿತ ಆಟದ ಸ್ಥಳಗಳನ್ನು ಒದಗಿಸುವ ಕುರಿತು ಯೋಜನೆಗಳನ್ನು ರೂಪಿಸುವ ಅಗತ್ಯವಿದೆ. ಈ ದುಃಖದ ಘಟನೆ ಗ್ರಾಮ ಸಮುದಾಯದಲ್ಲಿಯೇ ಕೇವಲ ನೋವಿನಲ್ಲಿಯೇ ಇರದೆ, ಮಕ್ಕಳ ಮೇಲಿನ ಜಾಗೃತಿ ಮತ್ತು ಸುರಕ್ಷತೆಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಈ ಘಟನೆಯು ಸ್ಥಳೀಯ ಸಮುದಾಯಕ್ಕೆ ಗಂಭೀರ ಪಾಠ ನೀಡಿದ್ದು, ಮಕ್ಕಳ ಸುರಕ್ಷತೆಯನ್ನು ಹೆಚ್ಚಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂಬ ಸಂದೇಶವನ್ನೂ ಸಾರುತ್ತಿದೆ.

ಈ ಹಿನ್ನೆಲೆಯಲ್ಲಿ, ಮುಂಬರುವ ದಿನಗಳಲ್ಲಿ ಸ್ಥಳೀಯ ಆಡಳಿತ, ಶಾಲೆಗಳು, ಪೋಷಕರು ಮತ್ತು ಸಮಾಜದ ಪ್ರತಿನಿಧಿಗಳು ಸೇರಿಕೊಂಡು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸುವ ಮತ್ತು ಜಾರಿಗೆ ತರುವ ನಿರ್ಧಾರ ಕೈಗೊಳ್ಳಲಿದ್ದಾರೆ. ಇಂತಹ ದುರ್ಘಟನೆಗಳು ಪುನರಾವೃತವಾಗದಂತೆ, ಮಕ್ಕಳ ಮೇಲೆ ಜಾಗೃತಿ ಮೂಡಿಸುವ ಕಾರ್ಯ ಕ್ರಮಗಳನ್ನೂ ಸ್ಥಳೀಯ ಸಂಸ್ಥೆಗಳು ಆರಂಭಿಸಲು ಮುಂದಾಗಿವೆ.

# ಚಿಕ್ಕಣ್ಣ ನಾಯಕನಾಗಿ 'ಜೋಡೆತ್ತು' ಹೊಸ ಸಿನಿಮಾ ಘೋಷಣೆ



ಬೆಂಗಳೂರು: ನಟ ಚಿಕ್ಕಣ್ಣ ನಾಯಕನಾಗಿ ನಟಿಸುತ್ತಿರುವ ಹೊಸ ಕನ್ನಡ ಚಿತ್ರಕ್ಕೆ 'ಜೋಡೆತ್ತು' ಎಂದು ನಾಮಕರಣ ಮಾಡಲಾಗಿದೆ. ಕಟ್ಟಿಗೇನಹಳ್ಳಿಯ ಸೋಮಶೇಖರ್ ನಿರ್ಮಿಸುತ್ತಿರುವ ಈ ಚಿತ್ರವನ್ನು ಎಸ್. ಮಹೇಶ್ ಕುಮಾರ್ ನಿರ್ದೇಶಿಸುತ್ತಿದ್ದಾರೆ. ಚಿತ್ರದ ಮುಹೂರ್ತ ಸಮಾರಂಭವು ಬೆಂಗಳೂರಿನಲ್ಲಿ ಅದ್ದೂರಿಯಾಗಿ ನೆರವೇರಿದ್ದು, ಖ್ಯಾತ ನಿರ್ದೇಶಕ ಮತ್ತು ನಿರ್ಮಾಪಕ ಆರ್. ಚಂದ್ರು ಕ್ಯಾಮೆರಾ ಸ್ವಿಚ್ ಆನ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಸ್ಯಾಂಡಲ್ವುಡ್‌ನ ಅಧ್ಯಕ್ಷ ಶರಣ್ ಅವರು ಕ್ಲಾಪ್ ಬೋರ್ಡ್ ತೋರಿಸಿ ಟೈಟಲ್ ಟೀಸರ್ ಬಿಡುಗಡೆ ಮಾಡಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸಮಾರಂಭಕ್ಕೆ ಆಗಮಿಸಿ ತಂಡದ ಉತ್ಸಾಹ ಹೆಚ್ಚಿಸಿದರು.

ಸದ್ಯ 'ಡಿ ಬೀಟ್ಸ್' ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಯಾದ ಟೈಟಲ್ ಟೀಸರ್‌ನಲ್ಲಿ ನಟ ಚಿಕ್ಕಣ್ಣ ಹಾಗೂ ತೆಲುಗು ನಟ ಸುನಿಲ್ ಕಾಣಿಸಿಕೊಂಡಿದ್ದಾರೆ. ಕನ್ನಡದ ಜೊತೆಗೆ ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಸಹ ಈ ಚಿತ್ರ ತಯಾರಾಗುತ್ತಿದ್ದು, ಬಹುಭಾಷಾ ಚಿತ್ರವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಶರಣ್ ಅವರು "ಎಲ್ಲಾ ಆಯಾಮದಲ್ಲೂ ಈ ಸಿನಿಮಾ ಅದ್ದೂರಿಯಾಗಿದೆ ಎಂಬುದಕ್ಕೆ ಟೀಸರ್ ಸಾಕ್ಷಿ. ಪ್ರತಿಭಾವಂತ ಕಲಾವಿದರು ಮತ್ತು ತಂತ್ರಜ್ಞರ ತಂಡವಿರುವ 'ಜೋಡೆತ್ತು' ದೊಡ್ಡ ಮಟ್ಟದ ಹಿಟ್ ಆಗಲಿ" ಎಂದು ಶುಭ ಹಾರೈಸಿದರು. ನಟ ಚಿಕ್ಕಣ್ಣ ಅವರು ಮಾತನಾಡಿ, "ಈ ಚಿತ್ರದ ಕಥೆ 80ರ ದಶಕದ ಹಳ್ಳಿಯ ಹಿನ್ನೆಲೆಯಲ್ಲಿದೆ. ನಿಜವಾದ 'ಜೋಡೆತ್ತು' ಯಾರೆಂಬುದು ಸದ್ಯದಲ್ಲೇ ತಿಳಿಯಲಿದೆ. ಇದು ನನ್ನ ವೃತ್ತಿಜೀವನದ ಅತಿದೊಡ್ಡ ಬಜೆಟ್ ಚಿತ್ರ. ಹಳ್ಳಿಯಲ್ಲಿ ಆರಂಭವಾಗಿ ಹಳ್ಳಿಯಲ್ಲೇ ಮುಕ್ತಾಯಗೊಳ್ಳುವ ಸಿನಿಮಾ ಇದು. ಫ್ಯಾಮಿಲಿ ಸೆಂಟಿಮೆಂಟ್, ಕಾಮಿಡಿ, ಆಕ್ಷನ್ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ನವೆಂಬರ್‌ನಿಂದ ಶೂಟಿಂಗ್ ಪ್ರಾರಂಭವಾಗಲಿದೆ. ರಾಮಮೂರ್ತಿ ಅವರು ಟೈಟಲ್ ನಮಗೆ ಬಿಟ್ಟುಕೊಟ್ಟಿದ್ದಾರೆ, ಅವರಿಗೆ ಧನ್ಯವಾದಗಳು" ಎಂದರು.

ನಿರ್ದೇಶಕ ಮಹೇಶ್ ಕುಮಾರ್ ಅವರು, "ಚಿಕ್ಕಣ್ಣ ಅವರ ಪಾತ್ರ ಮತ್ತು ಗೆಟಪ್ ಎರಡೂ ವಿಭಿನ್ನವಾಗಿದೆ. ಕಥೆ ಗಟ್ಟಿಯಾಗಿದ್ದು, ಪಕ್ಕಾ ದೇಸಿ ಸೊಗಡಿನ ಚಿತ್ರವಿದು. ನಾನು ಮಂಡ್ಯ ಮೂಲದವನು, ಆ ಸೊಗಡನ್ನು ಸಿನಿಮಾದಲ್ಲಿ ನೈಜವಾಗಿ ತೋರಿಸಲು ಪ್ರಯತ್ನಿಸುತ್ತೇನೆ" ಎಂದು ತಿಳಿಸಿದರು. ಆಕಾಶ್ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಮೂರನೇ ಚಿತ್ರ ಇದಾಗಿದ್ದು, ನಿರ್ಮಾಪಕ ಸೋಮಶೇಖರ್ ಅವರು "ಹಿಂದಿನ ಸಿನಿಮಾಗಳಿಗಿಂತ ಇದು ವಿಭಿನ್ನವಾಗಿರಲಿದೆ. ದೊಡ್ಡ ಮಟ್ಟದಲ್ಲಿ ನಿರ್ಮಿಸಿ, ಅದ್ದೂರಿಯಾಗಿ ಬಿಡುಗಡೆ ಮಾಡುವ ಉದ್ದೇಶವಿದೆ. ಬಜೆಟ್‌ಗೆ ಯಾವುದೇ ಮಿತಿ ಇಲ್ಲ. ಮಹೇಶ್ ದೇವ್ ಅವರ ಕಥೆ ಅದ್ಭುತವಾಗಿದೆ, ಅದನ್ನು ಪರದೆ ಮೇಲೆ ಇನ್ನೂ ಸೊಗಸಾಗಿ ತೋರಿಸಲು ಯೋಜನೆ ಇದೆ" ಎಂದರು.

ಈ ಚಿತ್ರಕ್ಕೆ ವಿ. ಹರಿಕೃಷ್ಣ ಐದು ಹಾಡುಗಳನ್ನು ಸಂಯೋಜಿಸುತ್ತಿದ್ದು, ಅವುಗಳಲ್ಲಿ ಮಾಸ್ ಮತ್ತು ಕ್ಲಾಸ್ ಅಂಶಗಳ ಸಂಯೋಜನೆಯಿದೆ. ಖ್ಯಾತ ಕ್ಯಾಮೆರಾಮನ್ ಸುಧಾಕರ್ ಎಸ್. ರಾಜ್ ಛಾಯಾಗ್ರಹಣ ವಹಿಸಿದ್ದು, ಮಾಸ್ತಿ, ರಾಜಶೇಖರ್ ಮತ್ತು ರಘು ನಿಡುವಳ್ಳಿ ಸಂಭಾಷಣೆಗಳನ್ನು ಬರೆದಿದ್ದಾರೆ. ಕಲಾ ನಿರ್ದೇಶನವನ್ನು ಮೋಹನ್ ಬಿ. ಕೆರೆ ನಿರ್ವಹಿಸುತ್ತಿದ್ದಾರೆ. 'ಜೋಡೆತ್ತು' ಸಿನಿಮಾ ಚಿಕ್ಕಣ್ಣ ಅವರ ವೃತ್ತಿಜೀವನದ ಹೊಸ ಮೈಲುಗಲ್ಲಾಗುವ ನಿರೀಕ್ಷೆ ವ್ಯಕ್ತವಾಗಿದೆ.

# ಸ್ಕ್ರ್ಯಾಪ್ ಗೋಡೌನ್‌ನಲ್ಲಿ ಭೀಕರ ಅಗ್ನಿ ಅವಘಡ

ಬೆಂಗಳೂರು, : ನಗರದ ಬೇಗೂರು ಅಕ್ಷಯನಗರ ಪ್ರದೇಶದಲ್ಲಿ ಶನಿವಾರ ಮಧ್ಯಾಹ್ನ ನಡೆದ ಆಕಸ್ಮಿಕ ಅಗ್ನಿ ಅವಘಡ ಸ್ಥಳೀಯರಲ್ಲಿ ಭೀತಿ ಮೂಡಿಸಿದೆ. ಸ್ಕ್ರ್ಯಾಪ್ ವಸ್ತುಗಳಿಂದ ತುಂಬಿದ್ದ ದೊಡ್ಡ ಪ್ರಮಾಣದ ಗೋಡೌನ್ ಬೆಂಕಿಗಾಹುತಿಯಾಗಿ ಮೂರು ಗಂಟೆಗಳ ಕಾಲ ಹೊತ್ತಿ ಉರಿದಿದೆ. ಆರಂಭಿಕ ವರದಿಗಳ ಪ್ರಕಾರ, ಸಿಲಿಂಡರ್ ಸ್ಫೋಟದಿಂದ ಬೆಂಕಿ ಹಬ್ಬಿದೆಯೆಂಬ ಶಂಕೆ ವ್ಯಕ್ತವಾಗಿತ್ತು. ಆದರೆ ಅಗ್ನಿಶಾಮಕ ಸಿಬ್ಬಂದಿ ಮತ್ತು ಸ್ಥಳೀಯರ ಪ್ರಾಥಮಿಕ ತನಿಖೆಯಲ್ಲಿ ಆಕಸ್ಮಿಕವಾಗಿ ಬೆಂಕಿ ತಗುಲಿದೆಯೆಂಬುದು ಸ್ಪಷ್ಟವಾಗಿದೆ. ಪೇಪರ್, ಪ್ಲಾಸ್ಟಿಕ್, ಕಾಟನ್ ಬಾಕ್ಸ್ ಮತ್ತು ಇತರ ಸುಲಭವಾಗಿ ಹೊತ್ತಿ ಉರಿಯುವ ವಸ್ತುಗಳು ಗೋಡೌನ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ವ್ಯಾಪಿಸಿತು.

ಬೆಂಕಿ ಕಾಣಿಸಿಕೊಂಡ ತಕ್ಷಣ ಸ್ಥಳೀಯರು ಪೊಲೀಸರಿಗೆ ಹಾಗೂ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಕೆಲವೇ ನಿಮಿಷಗಳಲ್ಲಿ ಅಗ್ನಿಶಾಮಕ ದಳದ ನಾಲ್ಕು ವಾಹನಗಳು ಸ್ಥಳಕ್ಕೆ ಧಾವಿಸಿ ಶ್ರಮಪಟ್ಟು ಬೆಂಕಿ ನಂದಿಸುವ ಕಾರ್ಯಾಚರಣೆಗೆ ಕೈಗೊಂಡವು. ಮೂರು ಗಂಟೆಗಳ ಕಾಲ ನಡೆದ ತೀವ್ರ ಪ್ರಯತ್ನದ ನಂತರ ಬೆಂಕಿಯನ್ನು ನಂದಿಸಲು ಅಧಿಕಾರಿಗಳಿಗೆ ಸಾಧ್ಯವಾಯಿತು.

ಅದೃಷ್ಟವಶಾತ್ ಗೋಡೌನ್‌ನಲ್ಲಿ ಸಂಗ್ರಹಿಸಲಾಗಿದ್ದ ಗ್ಯಾಸ್ ಸಿಲಿಂಡರ್‌ಗಳು ಬೆಂಕಿ ಸ್ಫೋಟಗೊಳ್ಳದೆ ಉಳಿದಿರುವುದರಿಂದ ದೊಡ್ಡ ಅನಾಹುತ ತಪ್ಪಿದೆ. ಸ್ಥಳೀಯರು ಘಟನೆಯ ಸಮಯದಲ್ಲಿ ಸುರಕ್ಷಿತವಾಗಿ ಹೊರಬಂದಿದ್ದು, ಯಾವುದೇ ಜೀವಹಾನಿ ಸಂಭವಿಸಿಲ್ಲ.ಆದರೆ, ಲಕ್ಷಾಂತರ ರೂಪಾಯಿ ಮೌಲ್ಯದ ಸ್ಕ್ರ್ಯಾಪ್ ವಸ್ತುಗಳು ಹಾಗೂ ವಾಣಿಜ್ಯ ಸಾಮಗ್ರಿಗಳು ಬೆಂಕಿಗೆ ಆಹುತಿಯಾಗಿವೆ. ಬೆಂಕಿಯ ಉಷ್ಣದಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ದಟ್ಟ ಹೊಗೆ ಹರಡಿದ್ದು, ಟ್ರಾಫಿಕ್‌ನಿಗೂ ಅಡ್ಡಿಯಾಯಿತು. ಪೊಲೀಸರು ಹಾಗೂ ಅಗ್ನಿಶಾಮಕ ಇಲಾಖೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಬೆಂಕಿ ತಗುಲಲು ಕಾರಣವಾದ ನಿಖರ ಕಾರಣವನ್ನು ಪತ್ತೆಹಚ್ಚುವ ಕಾರ್ಯ ಆರಂಭಿಸಿದ್ದಾರೆ. ಪ್ರಾಥಮಿಕ ಅಂದಾಜು ಪ್ರಕಾರ ಶಾರ್ಟ್ ಸರ್ಕ್ಯೂಟ್ ಅಥವಾ ತಪ್ಪಾದ ನಿರ್ಲಕ್ಷ್ಯದಿಂದ ಬೆಂಕಿ ತಗುಲಿರುವ ಸಾಧ್ಯತೆ ವ್ಯಕ್ತವಾಗಿದೆ.

# ಚಲಿಸುತ್ತಿದ್ದ ಬೈಕ್ ಮೇಲೆ ಮುರಿದು ಬಿದ್ದ ಬೃಹತ್ ಮರ: ಸ್ಥಳದಲ್ಲೇ ಯುವತಿ ಸಾವು

ಬೆಂಗಳೂರು: ಚಲಿಸುತ್ತಿದ್ದ ಬೈಕ್ ಮೇಲೆ ಬೃಹತ್ ಮರವೊಂದು ಬುಡಸಮೇತ ಉರುಳಿ ಬಿದಿದ್ದು, ಸ್ಥಳದಲ್ಲೇ ಯುವತಿಯೊಬ್ಬಳು ಸಾವನ್ನಪ್ಪಿದ್ದಾರೆ. ಬೆಂಗಳೂರಿನ ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿ ಬಳಿ ಈ ದುರ್ಘಟನೆ ನಡೆದಿದೆ.

ಮೃತ ಯುವತಿಯನ್ನು ಹೆಬ್ಬಾಳ ನಿವಾಸಿಯಾದ ಕೀರ್ತನಾ (24) ಎಂದು ಗುರುತಿಸಲಾಗಿದೆ. ಈ ಘಟನೆಯಲ್ಲಿ ಗಾಯಗೊಂಡಿರುವ ಭಾಸ್ಕರ್ ಎಂಬ ಬೈಕ್ ಸವಾರನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೀರ್ತನಾ, ಬಿಇ ಇಂಜಿನಿಯರಿಂಗ್ ಪದವೀಧರರಾಗಿದ್ದು, ಸ್ಯಾಂಡಲ್‌ವುಡ್ ಕ್ರಿಕೆಟ್ ಲೀಗ್‌ನಲ್ಲಿ ಭಾಗವಹಿಸಿ ಮನೆಗೆ ತೆರಳುತ್ತಿದ್ದ ವೇಳೆ ಈ ದುರಂತ ಸಂಭವಿಸಿದೆ. ರಾತ್ರಿ 8 ಗಂಟೆ ಸುಮಾರಿಗೆ, ಸೋಲದೇವನಹಳ್ಳಿ ಪೊಲೀಸ್ ಠಾಣೆಯ ಮುಂಭಾಗದ ರಸ್ತೆಯಲ್ಲಿ ಕೀರ್ತನಾ ಮತ್ತು ಭಾಸ್ಕರ್ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದರು.

# ಬಸ್ ಮತ್ತು ಕಾರಿನ ನಡುವೆ ಭೀಕರ ಡಿಕ್ಕಿ

## ಮೂವರು ಸ್ಥಳದಲ್ಲೇ ಸಾವು, ಇಬ್ಬರ ಸ್ಥಿತಿ ಗಂಭೀರ



ತುಮಕೂರು: ಜಿಲ್ಲೆಯಲ್ಲಿ ನಡೆದ ಈ ಭೀಕರ ರಸ್ತೆ ಅಪಘಾತವು ಮತ್ತೊಮ್ಮೆ ಸುರಕ್ಷಿತ ಸಂಚಾರದ ಅಗತ್ಯತೆಯನ್ನು ಎಚ್ಚರಿಸಿದೆ. ಅಕ್ಟೋಬರ್ 4, 2025 ರಂದು ತುಮಕೂರು ತಾಲೂಕಿನ ಬೆಳಧರ ಗೇಟ್ ಬಳಿ ಖಾಸಗಿ ಬಸ್ ಮತ್ತು ಕಾರಿನ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಮೂವರು ಪ್ರಾಣ ಕಳೆದುಕೊಂಡಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಘಟನೆಯು ಸ್ಥಳೀಯರಲ್ಲಿ ತೀವ್ರ ಆಘಾತ ಮೂಡಿಸಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ತುಮಕೂರಿನಿಂದ ಪಾವಗಡದ ಕಡೆಗೆ ಹೊರಟಿದ್ದ ಖಾಸಗಿ ಬಸ್ ಹಾಗೂ ಕೊರಟಗೆರೆಯಿಂದ ತುಮಕೂರಿನತ್ತ ಬರುತ್ತಿದ್ದ ಕಾರು ಪರಸ್ಪರ ಎದುರು ಎದುರು ಡಿಕ್ಕಿಯಾಗಿದ್ದು, ಅಪಘಾತ ಸಂಭವಿಸಿದೆ. ಡಿಕ್ಕಿಯ ತೀವ್ರತೆಯಿಂದ ಕಾರು ಸಂಪೂರ್ಣವಾಗಿ ನುಜ್ಜುನುಜ್ಜಾಗಿದ್ದು, ಅದರೊಳಗೆ ಪ್ರಯಾಣಿಸುತ್ತಿದ್ದ ಐವರ ಪೈಕಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉಳಿದ ಇಬ್ಬರನ್ನು ಸ್ಥಳೀಯರು ತಕ್ಷಣವೇ ರಕ್ಷಿಸಿ ಆಸ್ಪತ್ರೆಗೆ ಸಾಗಿಸಿದ್ದಾರೆ.

ಮೃತರನ್ನು ಕತ್ತಿನಾಗೇನಹಳ್ಳಿಯ ಶಿವಕುಮಾರ್ (28), ಬೈಚಾಪುರದ ಶಿವಶಂಕರ್ (28) ಮತ್ತು ಗೋವಿಂದಪ್ಪ (60) ಎಂದು ಗುರುತಿಸಲಾಗಿದೆ. ಗಾಯಗೊಂಡವರಾದ ರೆಡ್ಡಿಹಳ್ಳಿಯ ಶಂಕರ್ ಮತ್ತು ಕತ್ತಿನಾಗೇನಹಳ್ಳಿಯ ವೇಣುಗೋಪಾಲ್ ಅವರನ್ನು ತುರ್ತಾಗಿ ತುಮಕೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರಿಗೂ ತೀವ್ರ ಗಾಯಗಳಾಗಿರುವುದರಿಂದ ವೈದ್ಯರು ನಿಗಾ ವಹಿಸಿದ್ದಾರೆ. ಘಟನೆಯ ವೇಳೆ ಕಾರಿನಲ್ಲಿದ್ದವರು ಧಾರ್ಮಿಕ ಯಾತ್ರೆಯ ಭಾಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದತ್ತ ತೆರಳುತ್ತಿದ್ದರೆಂದು ಪೊಲೀಸರು ತಿಳಿಸಿದ್ದಾರೆ. ಪ್ರಯಾಣದ ವೇಳೆ ಬೆಳಧರ ಗೇಟ್ ಬಳಿ ಬಸ್ ಎದುರಿನಿಂದ ಬಂದಾಗ ತೀವ್ರ ವೇಗದ ಡಿಕ್ಕಿಯಾಗಿದೆ. ಡಿಕ್ಕಿಯ ಪರಿಣಾಮದಿಂದ ಕಾರು ಕಬ್ಬಿಣದ ಗುಡ್ಡೆಯಾಗಿ ಪರಿವರ್ತಿತವಾಗಿದ್ದು, ಸ್ಥಳದಲ್ಲೇ ಮೂವರ ಜೀವ ಹೋದಿದೆ.

ಅಪಘಾತದ ನಂತರ ಖಾಸಗಿ ಬಸ್‌ನ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಕಣ್ಣಾರೆ ಸಾಕ್ಷಿಗಳು ಹೇಳಿದ್ದಾರೆ. ಈ ಕುರಿತು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ ನಂತರ, ತುಮಕೂರು ಗ್ರಾಮಾಂತರ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ, ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರು ಬಸ್ ಚಾಲಕನ ವಿರುದ್ಧ ಅಪರಾಧಾತ್ಮಕ ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾದ ಪ್ರಕರಣ ದಾಖಲಿಸಿ ತನಿಖೆ ಪ್ರಾರಂಭಿಸಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ತುಮಕೂರು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಕಳುಹಿಸಲಾಗಿದೆ. ಈ ದಾರುಣ ಘಟನೆಯು ಸ್ಥಳೀಯರಲ್ಲಿ ದುಃಖ ಮತ್ತು ಆಕ್ರೋಶ ಉಂಟುಮಾಡಿದ್ದು, ರಸ್ತೆ ಸುರಕ್ಷತೆ, ನಿಯಮ ಪಾಲನೆ ಮತ್ತು ಚಾಲಕರ ಜವಾಬ್ದಾರಿತನದ ಕುರಿತ ಚರ್ಚೆ ಮತ್ತೆ ತೀವ್ರಗೊಂಡಿದೆ. ಸ್ಥಳೀಯರು ಅಪಘಾತ ಸಂಭವಿಸುವ ಪ್ರದೇಶದಲ್ಲಿ ವೇಗ ನಿಯಂತ್ರಣ ಚಿಹ್ನೆಗಳು ಮತ್ತು ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕೆಂದು ಸಾರಿಗೆ ಇಲಾಖೆಗೆ ಮನವಿ ಮಾಡಿದ್ದಾರೆ.

# ವಿವಾದದಲ್ಲಿ ಭಾರತ–ಪಾಕ್ ಮಹಿಳಾ ಕ್ರಿಕೆಟ್



| ಟೀಂ ಇಂಡಿಯಾ | ಪಾಕ್ |
|---|---|
| ಪ್ರತೀಕಾ ರಾವಲ್ | ಮುನಿಬಾ ಅಲಿ, |
| ಸ್ಮೃತಿ ಮಂಧಾನ | ಸದಾಫ್ ಶಮಾಸ್ |
| ಹರ್ಲೀನ್ ಡಿಯೋಲ್ಲ | ಸಿದ್ರ್ ಅಮೀನ್ |
| ರ್ಮನ್ ಪ್ರೀತ್ ಕೌರ್ (ನಾ) | ರಮೀನ್ ಶಮೀಮ್ |
| ಜೆಮಿಮಾ ರೊಡ್ರಿಗ್ಸ್ | ಆಲಿಯಾ ರಿಯಾಜ್ |
| ದೀಪ್ತಿ ಶರ್ಮಾ | ಸಿದ್ದ ನವಾಜ್ |
| ರಿಚಾ ಘೋಷ್ | ಫಾತಿಮಾ ಸನಾ (ನಾ) |
| ಸ್ನೇಹ್ ರಾಣಾ | ನಟಾಲಿಯಾ ಪರ್ವೈಜ್ |
| ರೇಣುಕಾ ಸಿಂಗ್ | ಡಯಾನಾ ಬೇಗ್ |
| ಕ್ರಾಂತಿ ಗೌಡ್ | ನಶ್ರ್ ಸಂಧು |
| ಶ್ರೀ ಚಾರಣಿ. | ಸಾಲಿಯಾ ಇಕ್ಬಾಲ್ |

ಕೊಲಂಬೊ: ಇತ್ತೀಚೆಗೆ ಮುಕ್ತಾಯಗೊಂಡ ಪುರುಷರ ಟಿ20 ಏಷ್ಯಾಕಪ್ ಟೂರ್ನಿಯಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯಗಳು ಸಾಕಷ್ಟು ವಿವಾದಗಳಿಗೆ ಕಾರಣವಾಗಿದ್ದವು. ಆದಾಗ್ಯೂ, ಟೀಂ ಇಂಡಿಯಾ ಲೀಗ್, ಸೂಪರ್-4 ಹಾಗೂ ಫೈನಲ್‌ನಲ್ಲಿ ಪಾಕ್ ತಂಡವನ್ನು ಸೋಲಿಸುವ ಮೂಲಕ ಪಂದ್ಯಗಳಲ್ಲಿ ತಿರುಗೇಟು ತೋರಿಸಿತು. ಆದರೆ ಇದೀಗ, ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸಹ ಈ ವಿವಾದಗಳು ಸಹಜವಾಗಿ ಮುಂದುವರಿಯುತ್ತಿವೆ.

ಈ ಬಾರಿ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯನ್ನು ಭಾರತ ಆತಿಥ್ಯ ನೀಡಬೇಕಾಗಿದ್ದರೂ, ಪಾಕ್ ತಂಡದೊಂದಿಗೆ ಉದ್ರಿಕ್ತಿಗಳ ಕಾರಣದಿಂದ ಪಂದ್ಯಗಳನ್ನು ಶ್ರೀಲಂಕಾದ ಪ್ರೇಮದಾಸ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಇಂದು ನಡೆಯುತ್ತಿರುವ ಭಾರತ-ಪಾಕ್ ಮುಖಾಮುಖಿ ಪಂದ್ಯದಲ್ಲಿ ಪಾಕ್ ನಾಯಕಿ ಫಾತಿಮಾ ಸನಾ ಮೊದಲು ಫೀಲ್ಡಿಂಗ್ ಆಯ್ದುಕೊಂಡಿದ್ದು, ಬ್ಯಾಟಿಂಗ್ ಅವಕಾಶವನ್ನು ಭಾರತಕ್ಕೆ ಬಿಟ್ಟಿದ್ದಾರೆ. ಆದರೆ ಟಾಸ್ ವೇಳೆ ಟೀಂ ಇಂಡಿಯಾ ನಾಯಕಿ ಹರ್ಮನ್ ಪ್ರೀತ್ ಕೌರ್ ಫಾತಿಮಾ ಸನಾದ ಕೈಕಾಲನ್ನು ಅನುಸರಿಸದೆ ಮುಂಬರುವ ಸ್ಥಾನಕ್ಕೆ ಹಿಂದೆ ಸರಿದಿದ್ದಾರೆ. ಈ ಘಟನೆಯು ಪಾಕ್ ತಂಡದಲ್ಲಿ ಪುನಃ ಉದ್ದೀಪನವನ್ನು ಮೂಡಿಸಿದೆ.

ಭಾರತ-ಪಾಕ್ ಮಹಿಳಾ ಕ್ರಿಕೆಟ್ ಪಂದ್ಯವು ಕೇವಲ ಕ್ರೀಡಾಪಟುಗಳ ನಡುವೆ ಸ್ಪರ್ಧೆಯಲ್ಲದೆ, ಭಾರತ-ಪಾಕ್ ಕ್ರೀಡಾ ಸಂಘರ್ಷದ ಹಿನ್ನೆಲೆಯಲ್ಲಿ ವಿಶೇಷ ಗಮನಕ್ಕೆ ಬರುವ ಘಟನೆಗಳಾಗಿ ಪರಿಣಮಿಸಿದೆ. ಫೀಲ್ಡಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಎದುರಿದ ತೊಂದರೆಗಳು, ನಾಯಕಿ ಕೃತಿಗಳ ನಡುವಿನ ಕ್ಷಣಗಳು ಅಭಿಮಾನಿಗಳ ಗಮನ ಸೆಳೆದಿವೆ.

# ಬೆಂಗಳೂರು: ನಾಗಸಂದ್ರದಿಂದ ಗೊರಗುಂಟೆಪಾಳ್ಯವರೆಗೆ ರಸ್ತೆಯಲ್ಲಿ ಪಂಚರ್ ಮಾಫಿಯಾದ ಮೊಳೆಗಳ ರಾಶಿ



ಬೆಂಗಳೂರು, ಅಕ್ಟೋಬರ್ 5: ಬೆಂಗಳೂರಿನ ಹೊರವಲಯದ ರಸ್ತೆಗಳು, ವಿಶೇಷವಾಗಿ ಟಿ. ದಾಸರಹಳ್ಳಿ ಪ್ರದೇಶದಿಂದ ನಾಗಸಂದ್ರ, ಮೂಲಕ ಗೊರಗುಂಟೆಪಾಳ್ಯ ಕಡೆಗೆ ತೆರಳುವ ಪ್ರಮುಖ ಮಾರ್ಗಗಳಲ್ಲಿ ಪಂಚರ್ ಮಾಫಿಯಾ ಮತ್ತೊಂದು ತೀವ್ರ ಘಟನೆಗೆ ಕಾರಣವಾಗಿದೆ. ವಾಹನ ಸವಾರರು ತಮ್ಮ ಅನುಭವವನ್ನು ದಾಖಲಿಸಿ, ಸಾಕ್ಷ್ಯಪೂರಿತ ವಿಡಿಯೋ ಕೂಡ ಸಂಚರಿಸಿದ್ದು, ಈ ರಸ್ತೆ ಬಳಕೆಯವರಿಗೆ ಭಾರೀ ಆತಂಕ ಉಂಟುಮಾಡಿದೆ.

ವಿಡಿಯೋದಲ್ಲಿ ಕಾಣಿಸಿಕೊಂಡಂತೆ, ಗೊರಗುಂಟೆಪಾಳ್ಯದ ಪ್ರಮುಖ ಸಿಗ್ನಲ್ನ ಬಳಿ ರಸ್ತೆ ಮೇಲೆ ಬೈಕ್ ಟಯರ್ ಆಗಾಗ ಪಂಚರ್ ಆಗುತ್ತಿತ್ತು. ಸ್ಥಳಕ್ಕೆ ನಿಲ್ಲಿಸಿ ಪರಿಶೀಲಿಸಿದಾಗ, ರಸ್ತೆ ಮೇಲೆ intentionally ಹಾಕಿದ ಸಣ್ಣ ಮೊಳೆಗಳ ಗುಂಪು ಕಂಡು ಬಂದಿದೆ. ಸವಾರರು ಈ ದೃಶ್ಯವನ್ನು ನೋಡಿದಾಗ ತೀವ್ರ ಅಚ್ಚರಿಯನ್ನೂ, ಕೋಪವನ್ನೂ ವ್ಯಕ್ತಪಡಿಸಿದ್ದಾರೆ.

ನಗರದ ಹಲವು ಭಾಗಗಳಲ್ಲಿ ಈ ರೀತಿಯ ಪಂಚರ್ ಮಾಫಿಯಾ ಘಟನಿಗಳು ಹಿಂದೊಂದೆ ನಡೆದಿರುವುದಾಗಿ ವರದಿಯಾಗಿದೆ. ಕೆಲವು ದಿನಗಳ ಹಿಂದೆ, ರಾಜ್‌ಕುಮಾರ್ ಸಮಾಧಿಯಿಂದ ಗೊರಗುಂಟೆಪಾಳ್ಯ ಕಡೆಗೆ ತೆರಳುವ ಮಾರ್ಗದಲ್ಲಿ intentionaly ರಸ್ತೆ ಮೇಲೆ ಮೊಳೆಗಳನ್ನು ಬಿಸಿಟ್ಟು ವಾಹನಗಳಿಗೆ ಹಾನಿ ಮಾಡಲಾಗುತ್ತಿದೆ ಎಂಬ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಸಾರ್ವಜನಿಕರು ಮತ್ತು ವಾಹನ ಸವಾರರು ಇದನ್ನು ತೀವ್ರವಾಗಿ ಆಕ್ಷೇಪಿಸಿದ್ದಾರೆ.

ಸವಾರರು ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ. "ರಸ್ತೆ ಬಳಕೆದಾರರಿಗೆ ನಿರಂತರವಾಗಿ ಅಪಾಯ ಉಂಟುಮಾಡುತ್ತಿರುವ ಪಂಚರ್ ಮಾಫಿಯಾದ ಕ್ರಮ ತಕ್ಷಣ ಕೈಗೊಳ್ಳಬೇಕು. ಇದರಿಂದ ರಸ್ತೆಯಲ್ಲಿ ಸುರಕ್ಷತೆಯ ಕೊರತೆ ಉಂಟಾಗುತ್ತದೆ ಮತ್ತು ಅಪಘಾತ ಸಂಭವಿಸಲು ಸಾಧ್ಯ" ಎಂದು ಕೆಲವು ಸವಾರರು ಹೇಳಿದರು.

ಈ ಘಟನೆ ರಸ್ತೆ ಸುರಕ್ಷತೆ ಹಾಗೂ ಸಾರ್ವಜನಿಕರ ಭದ್ರತೆ ಬಗ್ಗೆ ಹೊಸ ಬೆಳಕು ಹೊತ್ತಿದೆ. ನಗರದ ಹೊರವಲಯದ ಪ್ರದೇಶಗಳಲ್ಲಿ intentional damage ಮಾಡುವ Pancher Mafia ವಿರುದ್ಧ ಕಠಿಣ ಕ್ರಮ ಕೈಗೊಳ್ಳದೇ ಇದ್ದರೆ, ವಾಹನ ಅಪಘಾತಗಳ ಸಂಭವ ಹೆಚ್ಚಬಹುದು ಎಂದು ವಾಹನ ಸವಾರರು ಎಚ್ಚರಿಸಿದ್ದಾರೆ. ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಸಿಸಿಟಿವಿ ಫುಟೇಜ್ ಮತ್ತು ಸಾರ್ವಜನಿಕರಿಂದ ಬಂದ ಸಾಕ್ಷ್ಯಗಳನ್ನು ಸಂಗ್ರಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಸಾರ್ವಜನಿಕರ ಭದ್ರತೆ ದೃಢಪಡಿಸುವುದು ಅಗತ್ಯವಿದೆ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಈ ರೀತಿಯ ಕೃತ್ಯಗಳು ತೀವ್ರವಾಗುತ್ತಲೇ ಇದ್ದು, ಪಕ್ಕದ ಪ್ರದೇಶಗಳ ವಾಹನ ಮತ್ತು ಸಾರ್ವಜನಿಕರ ಭದ್ರತೆ ಮೇಲೆ ನಿರಂತರ ತೊಂದರೆ ಸೃಷ್ಟಿಸುತ್ತಿದೆ. ಪರಿಶೀಲನೆ ಮತ್ತು ಕ್ರಮ ಕೈಗೊಳ್ಳುವ ಮೂಲಕ ಮಾತ್ರ ಈ ಪ್ರಕರಣಗಳನ್ನು ಕಡಿಮೆ ಮಾಡಬಹುದು ಎಂಬುದು ಸ್ಥಳೀಯರ ಒಪ್ಪಿಗೆಯಾಗಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.